# ಈ ಹೊತ್ತಿಗೆ ನಿದ್ರೆ ಹತ್ತಿಲ್ಲ



**ವಿಶಾಲ್ ಮ್ಯಾಸರ್**

ಕಲೆ: ಜಬೀವುಲ್ಲಾ ಎಂ. ಅಸದ್

ಈ ಹೊತ್ತಿಗೆ ನಿದ್ರೆ ಹತ್ತಿಲ್ಲ ಗೆಳೆಯ,
ಕತ್ತಲೆಯ ಹಾದಿಯಲ್ಲಿ ಕಂದೀಲು ಇಲ್ಲದೆ
ನಡೆಯಲಾರೆ, ದಾರಿ ಸವೆಸಲಾರೆ
ದೇವಭಾಷೆಯಲ್ಲಿ ಕಾಣುವಂತೆ ಕನಸು
ಫರ್ಮಾನು ಹೊರಡಿಸಿದ್ದಾನೆ ದೊರೆ

ಗೆಳೆಯ, ಈ ಕಿಟಕಿ ತೆಗೆಯಲು ನನಗೆ ಭಯ
ಶಾಲೆ ಹೂವುಗಳಿಗೆ ಬಟ್ಟೆಯಿಲ್ಲ
ಪುಸ್ತಕಕ್ಕೆ ಬ್ರಹ್ಮದಾರ ಸುತ್ತಿದ್ದಾರೆ
ಗೂಡಿಗೊಂದು ಮಾಡವಿಲ್ಲ,
ಕಂಬಗಳು ಬಿದ್ದಿವೆ
ತಲೆಗೆ ಟೋಪಿ, ಕೈಗೆ ಲಾಠಿ
ತ್ರಿಶೂಲ ದೀಕ್ಷೆ ಕೊಡಲಾಗಿದೆ
ಮತ್ತೂ ಭಯ ನನಗೆ,
ಅಕ್ಷರಗಳೆಲ್ಲ ಕಪ್ಪಿರದೆ ಆಗಿವೆ ಬಣ್ಣ ಬಣ್ಣ

ಏಳಬೇಕಿದೆ ಗೆಳೆಯ, ಎಚ್ಚರಗೊಳ್ಳಬೇಕು
ಅಜಾನಿನೊಂದಿಗೆ ರಾಮ ಸೇರಿದ್ದಾನೆ
ಕೂಗು ಕಾದ ಸೀಸವಾಗಿದೆ.
ಕೀಳಬೇಕಿದೆ ಕೆಸರ ಹೂವು
ಬಲಗೈಗೊಂದು ಕತ್ತರಿ ಹಿಡಿ,
ಕತ್ತರಿಸೋಣ.
ಎಡಗೈಗೆ ಸೂಜಿ ದಾರ
ಬೆಳಕ ಹೆಣೆಯೋಣ.
ನಿದ್ರೆಗೆಡುವುದು ಅನಿವಾರ್ಯ.

